ಶ್ರೀ ಎಸ್. ಧ್ರುವನಾರಾಯಣ್ :- ಮಾನ್ಯ ಚಲುವರಾಯಸ್ವಾಮಿಯವರೇ ದಯವಿಟ್ಟು ಇದು ತಪ್ಪು ಮಾಹಿತಿ ಇದೆ. ಕಳೆದ ಅಧಿವೇಶನದಲ್ಲಿ ಮಾನ್ಯ ಹೊರಟ್ಟಿಯವರು ಅಧಿಕೃತವಾಗಿ 3400 ಹುದ್ದೆಗಳು ಖಾಲಿ ಇವೆ ಎಂದು ಅವರು ಹೇಳಿದ್ದಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ :- ನಿಮ್ಮ ಸಾಮಾಧನಕ್ಕಾಗಿ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಧ್ರುವನಾರಾಯಣ್ :- ಮಾನ್ಯ ಅಧ್ಯಕ್ಷರೆ, ತಪ್ಪು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ನಾನು ಸಮಜಾಯಿಷಿ ಕೇಳುತ್ತಿದ್ದೇನೆ.

ಶ್ರೀ ಎನ್ ಚೆಲುವರಾಯಸ್ವಾಮಿ :- 2400 ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಇದ್ದೇವೆ. ಆ ಹುದ್ದೆಗಳು ಖಾಲಿ ಇಲ್ಲದೇ ಇರುವುದರಿಂದ ತತ್‌ಕ್ಷಣ ನಾವು ಭರ್ತಿ ಮಾಡುತ್ತೇವೆ ಎನ್ನುವುದನ್ನು ಉತ್ತರದಲ್ಲಿ ಕೊಟ್ಟಿದ್ದೇನೆ. ಒಂದು ಹೆಜ್ಜೆ ಮುಂದಕ್ಕೆ ಹೋಗಿ ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಇನ್ನು ಹೆಚ್ಚಿನ ಮಾಹಿತಿಯನ್ನು ತೆಗೆದುಕೊಂಡು ನಿಮ್ಮನ್ನು ಕರೆದು ಕೂರಿಸಿಕೊಂಡು ಚರ್ಚೆ ಮಾಡಿ ಮಾಡೋಣ. ನಿಮಗಿಂತ ಒಂದು ಹೆಜ್ಜೆ ಹೆಚ್ಚು ಆಸಕ್ತಿ ನಮಗೆ ಇದೆ. ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ನೀವು ಚರ್ಚೆ ಮಾಡುವುದಾದರೆ, ಮಾಡಿ ನನ್ನದೇನು ಅಭ್ಯಂತರವಿಲ್ಲ. ನಾನು ಉತ್ತರವನ್ನು ಎಷ್ಟು ಹೇಳಬೇಕೋ ಅಷ್ಟು ಹೇಳಬೇಕಾಗುತ್ತದೆ.

13. ಪ್ರಕಟಣೆ

ವಿಷಯ :- ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕ 2007 ಅನ್ನು ವಿಧಾನಪರಿಷತ್ ಯಾವುದೇ ತಿದ್ದುಪಡಿಗಳಿಲ್ಲದೇ ಅನುಮೋದಿಸಿರುವ ಬಗ್ಗೆ.

ಅಧ್ಯಕ್ಷರು :- ಈಗ ಒಂದು ಪ್ರಕಟಣೆ ಇದೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡಂತೆ ಸಂದೇಶ ಬಂದಿರುತ್ತದೆ.

ನಿಯಮ 118 ರ ಮೇರೆಗೆ 2007 ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ವಿಧಾನ ಪರಿಷತ್ ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿದೆ ಎಂದು ತಿಳಿಸಿರುತ್ತಾರೆ.

ಅಧ್ಯಕ್ಷರು :- ಮಾನ್ಯ ಶಿವಾನಂದ ಪಾಟೀಲ್‌ರವರು ಕುಳಿತಿದ್ದಾರೆ. ಶಿವಾನಂದ ಪಾಟೀಲ್‌ರೇ ಏನು ಕೇಳುತ್ತೀರಿ? ನೀವು ಆವತ್ತು ಮಾತನಾಡಿದ್ದೀರಿ, ನಮ್ಮ ಸಹಕಾರ ಸಚಿವರು ಉತ್ತರ ಕೊಟ್ಟಿದ್ದಾರೆ, Companies Act ಎಂದು ಗೃಹ ಸಚಿವರೂ ಉತ್ತರ ಕೊಟ್ಟಿದ್ದಾರೆ. ಈಗ ಏನಾದರೂ ಕೇಳುತ್ತೀರಾ? ಕೇಳುವುದಾದರೆ ಕೇಳಿ. ಒಂದು ಪಾಯಿಂಟ್ ನಾನು ಏನೋ ಕೇಳಲಿಲ್ಲವೆಂದು ಹೇಳುತ್ತಿದ್ದೀರಿ.

14. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರ :

(ಅ) ಸಿದ್ಧೇಶ್ವರ ಸಹಕಾರ ಬ್ಯಾಂಕಿನಲ್ಲಿನ ದುರ್ವ್ಯವಹಾರದ ಬಗ್ಗೆ :

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :- ಮಾನ್ಯ ಅಧ್ಯಕ್ಷರೆ, ಅವರು ಅವತ್ತೂ ಉತ್ತರ ಕೊಡಲಿಲ್ಲ. ಇವತ್ತೂ ನಮ್ಮ ಸ್ಥಿತಿ ಅದೇ ಇದೆ. ಏಕೆಂದರೆ, ನೀವು ಎಡಕ್ಕೂ ನೋಡಿ, ಬಲಕ್ಕೂ ನೋಡಿ. ಹಣೆಬರಹ ಹಾಗಿದೆ. ಮುಂದೆ ನೋಡಿದರೆ ಗೊತ್ತಾಗುತ್ತದೆ. ಮಾನ್ಯ ಮಾಧುಸ್ವಾಮಿಯವರ ಹಣೆಬರಹ ಏನಾಯಿತು, ಮಾನ್ಯ ಧ್ರುವನಾರಾಯಣ್‌ರವರ ಹಣೆಬರಹ ಏನಾಯಿತು ನಮ್ಮದೂ ಅದೇ ಆಗುತ್ತದೆ. ನಮಗೆ ಗೊತ್ತಿದೆ...

ಶ್ರೀ ಹೆಚ್. ನಿಂಗಪ್ಪ :- ಕೋರಂ ಇಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಕೋರಂ ಇಲ್ಲದೇ ಹೌಸ್ ನಡೆಸುವುದು. ಬರೆಯುವುದಕ್ಕೂ ಇಲ್ಲಿ ಯಾರೂ ಇಲ್ಲ. ಯಾರೂ ಭಯ ಪಡಬೇಕಾಗಿಲ್ಲ. ನಾನು ಆವತ್ತು ಮಾನ್ಯ ಜಿ.ಟಿ. ದೇವೇಗೌಡರಿಗೆ ಕೇಳಿಕೊಂಡಿದ್ದೆ, ಈ ವಿಷಯ enquiry ಮಾಡತಕ್ಕಂತಹ ದೃಷ್ಟಿಯಲ್ಲಿ ಕೇವಲ co-operative ಗೆ ಸಂಬಂಧಪಟ್ಟಿರತಕ್ಕಂತಹ ವಿಷಯವನ್ನು ಪ್ರಸ್ತಾಪ ಮಾಡಿ ಉತ್ತರ ಕೊಟ್ಟಿರಿ. ಆದರೆ co-operative Institution ನಿಂದ Registerar of Company Affairs ಗೆ ಕೊಟ್ಟಿರತಕ್ಕಂತಹ ದುಡ್ಡಿನ ಬಗ್ಗೆ ನಮ್ಮ ಕಾನೂನಿನ ವ್ಯಾಪ್ತಿಗೆ ಬರುವುದಿಲ್ಲ, ಅದಕ್ಕಾಗಿ ನಾವು enquiry ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂತಹ ಮಾತನ್ನು ನೀವು ಹೇಳಬೇಕೆಂದು ಆ ದಿವಸ ಪ್ರಯತ್ನ ಮಾಡಿದಿರಿ. ಆದರೆ ನಾನು Home Minister ಗೆ ಕೇಳಿಕೊಂಡೆ. ಇಲ್ಲ ಹಾಗಾಗುವುದಿಲ್ಲ. ಇದೇ ಸಭೆಯಲ್ಲಿ ಕೆಲವು precedents ಇವೆ. ಆ precedents ನೀವು ತೆಗೆದು ನೋಡಬಹುದು.